158ನೇ ಮುಖ SL.NO:-18, 10-03-2026

<u>ನಗರಾಭಿವೃದ್ಧಿ ಇಲಾಖೆ(ಮಹಾನಗರ ಪಾಲಿಕೆ-2)</u>
<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ, ಇವರು ಶೂನ್ಯ ವೇಳೆಯಲ್ಲಿ</u>
**<u>ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.</u>**

***<u>ಸೂಚನೆ:-</u>***

ಬೇಸಿಗೆಯ ಬಿಸಿ ಏರುತ್ತಿದ್ದಂತ ಮಂಗಳೂರಿನಲ್ಲಿ ಕುಡಿಯುವ ನೀರಿನ ತಲೆ ಬಿಸಿ ಶುರುವಾದಂತಿದೆ. ಈ ಬಾರಿ ಮಳೆ ಕಡಿಮೆ ಎಂಬ ವರ್ತಮಾನದ ಹಿನ್ನೆಲೆಯಲ್ಲಿ ಮೇ, ಜೂನ್ ವೇಳೆಗೆ ಮಳೆಯಾಗದಿದ್ದರೆ ನಗರಕ್ಕೆ ಕುಡಿಯುವ ನೀರಿನ ಆತಂಕ ಎದುರಾಗಲಿದೆ.

ಕಳೆದ ಸಾಲಿನಲ್ಲಿ ಪಾಲಿಕೆಗೆ ಕುಡಿಯುವ ನೀರು ಪೂರೈಕೆಯಲ್ಲಿ ಹೆಚ್ಚಿನ ಸಮಸ್ಯೆ ತಲೆದೋರಿರಲಿಲ್ಲ. ಆದರೆ ಈ ಬಾರಿ ನೇತ್ರಾವತಿ ನದಿಯಲ್ಲಿ ಪ್ರಸ್ತುತ ಇರುವ ನೀರಿನ ಒಳಹರಿವಿನ ಸ್ಥಿತಿ ಎಚ್ಚರಿಕೆಯ ಗಂಟೆಯನ್ನು ಬಾರಿಸಿದೆ. ಸದ್ಯ ತುಂಬೆ ವೆಂಟೆಡ್ ಡ್ಯಾಂನ ಎಲ್ಲ ಗೇಟ್‌ಗಳನ್ನು ಮುಚ್ಚಿ 6 ಮೀಟರ್ ನೀರು ನಿಲ್ಲಿಸಲಾಗಿದೆ. 10.49 ಎಂಸಿಎಂ ನೀರು ಸಂಗ್ರಹವಿದೆ. ಇದನ್ನು ಅಂದಾಜು 39 ದಿನಗಳ ಅವಧಿಗೆ ಪೂರೈಕೆ ಮಾಡಬಹುದಾಗಿದೆ. ಇದಕ್ಕೂ ಮುನ್ನ ಮಳೆಯಾದರ ಸಮಸ್ಯೆ ಇಲ್ಲ; ಒಂದು ವೇಳೆ ಮಳೆಯಾಗದಿದ್ದರೆ ತೀವ್ರ ಸಮಸ್ಯೆ ಎದುರಿಸಬೇಕಾಗಿದೆ.

ಹಾಗಾದರೆ ಮುಂದೇನು? ಎಂಬ ಪ್ರಶ್ನೆಗೆ ಈಗಿಂದಲೇ ಉತ್ತರ ಹುಡುಕುವ ಪ್ರಯತ್ನ ಮಾಡಬೇಕಿದೆ. ಮಳೆಯಾಗದಿದ್ದರೆ ನೀರಿನ ಸರಬರಾಜಿಗೆ ಏನು ಕ್ರಮ? ಎಂಬ ಬಗ್ಗೆ ಆದ್ಯತೆಯನ್ನು ಈಗಲೇ ಯೋಚಿಸಬೇಕಿದೆ. ಸಾಧ್ಯಾಸಾಧ್ಯತೆಗಳ ಪೈಕಿ ತುಂಬೆ ಡ್ಯಾಂನಲ್ಲಿ ನೀರು ಕಡಿಮೆ ಆದಾಗ ಅದರ ಕೆಳಭಾಗದಿಂದ (ಅಡ್ಯಾರ್ ಡ್ಯಾಂ) ಪ್ರತೀದಿನ ಗರಿಷ್ಠ 50 ಎಂಎಲ್ ಡಿ ನೀರನ್ನು ತುಂಬ ಡ್ಯಾಂಗೆ ಹರಿಸಿ ಡ್ಯಾಂನಲ್ಲಿ ನೀರು ಕಾಯ್ದುಕೊಳ್ಳುವುದು, ಎಲ್ಲ ವಾರ್ಡ್ ನಲ್ಲಿರುವ 140 ಬೋರ್ ವೆಲ್ ಗಳ ಹಾಗೂ ಬಾವಿಗಳ ಸ್ವಚ್ಛತೆ, ದುರಸ್ತಿ ಮಾಡುವುದು ಎಎಂಆರ್‌ಡ್ಯಾಂನಿಂದ ನೀರು ಹರಿಸುವುದು ಎಂಬಿತ್ಯಾದಿ ಪೂರಕ ಕ್ರಮಗಳು ಇದೆಯಾದರೂ ಎತ್ತರ ಪ್ರದೇಶಗಳಿಗೆ ಎದುರಾಗುವ ನೀರಿನ ಸಮಸ್ಯೆಗೆ ಪರಿಹಾರ ನೀಡಬೇಕಾದ ಗುರುತರ ಜವಾಬ್ದಾರಿ ಪಾಲಿಕೆಯು ಚಿಂತನ ನಡೆಸಬೇಕಾಗಿದೆ.

ಪ್ರಸ್ತುತ ಮಂಗಳೂರು ನಗರಪಾಲಿಕೆ ವ್ಯಾಪ್ತಿಯಲ್ಲಿ 86 ಸಾವಿರ ನೀರಿನ ಸಂಪರ್ಕ ಹೊಂದಿಕೊಂಡಿದ್ದು, ಅದೇ ರೀತಿ ಅಕ್ರಮವಾಗಿ ಸರಿ ಸುಮಾರು 20 ಸಾವಿರಕ್ಕೂ ಹೆಚ್ಚು ನೀರಿನ ಸಂಪರ್ಕವನ್ನು ಹೊಂದಿದೆ. ವೆಂಟೆಡ್ ಡ್ಯಾಂ ನಗರಪಾಲಿಕೆ ಶುದ್ಧಿಕರಣ ಘಟಕ್ಕೆ ಆಗಮಿಸುವ ದಾರಿಯಲ್ಲಿ ಅಕ್ರಮವಾಗಿ ನೀಡಲಾಗಿದ. ಇದನ್ನು ಕೂಡಲೇ ಸರಿಪಡಿಸುವ ಹೊಣೆಗಾರಿಕ ನಗರಪಾಲಿಕೆ ಮೇಲಿದೆ. ಅಲ್ಲದೇ ನಗರಪಾಲಿಕೆ ಒಳಗಡೆ ಇರುವ ಬಾವಿಗಳನ್ನು ಸ್ವಚ್ಛಗೊಳಿಸಿ ಕುಡಿಯುವ ನೀರಿನ ಮಟ್ಟ ಶುದ್ಧಿಕರಣಗೊಳಿಸುವ ಕೆಲಸವನ್ನು ಕೂಡಲೇ ಪ್ರಾರಂಭಿಸಬೇಕು. ದಿನಕ್ಕೆ 170 ಎಂ.ಎಲ್.ಡಿ ನೀರಿಉ ಬೇಕಾಗುವುದರಿಂದ ನೀರಿನ ಅಭಾವ ಉಂಟಾಗದಂತೆ ನಗರಾಭಿವೃದ್ಧಿ ಇಲಾಖೆ ಸಭೆ ನಡೆಸಿ ಕೂಡಲೇ ಈ ಪರಿಹಾರ ಕಂಡುಕೊಳ್ಳುವ ಅವಶ್ಯಕತೆ ಇದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. 2019ರಲ್ಲಿ ಪ್ರಾರಂಭಗೊಂಡ ಜಲಶ್ರೀ 24*7 ನೀರು ಸರಬರಾಜು ಯೋಜನೆ 2025ರಲ್ಲಿ ಪೂರ್ಣಗೊಳ್ಳಬೇಕಾಗಿತ್ತು. ಇನ್ನೂ 5 ವರ್ಷ ಕಳೆದರೂ 24*7 ನೀರು ನೀಡುವ ಹಂತದಲ್ಲಿ ಕಾಮಗಾರಿ ಸಾಗುತ್ತಿಲ್ಲ. ಈ ಬಗ್ಗೆಯು ನಗರಾಭಿವೃದ್ಧಿ ಇಲಾಖೆ ಸಭೆಯನ್ನು ಕರೆದು ನೀರು ಸರಬರಾಜು ವ್ಯವಸ್ಥೆಯಲ್ಲಿ ಆಗಿರುವ ಲೋಪವನ್ನು ಸರಿ ಪಡಿಸಿ ಕುಡಿಯುವ ನೀರಿನ ವಿತರಣೆ ವ್ಯವಸ್ಥೆಯನ್ನು ಉನ್ನತಿಕರಣಗೊಳಿಸದೇ ಇದ್ದಲ್ಲಿ ಅದು ನಿರೀಕ್ಷಿತ ಫಲಿತಾಂಶ ನೀಡದು ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ನಗರಾಭಿವೃದ್ಧಿ ಇಲಾಖೆಯು ಈ ಬಗ್ಗೆ ಕೂಡಲೇ ಕ್ರಮಕೈಗೊಳ್ಳಬೇಕಾಗಿ ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:-**

**ತುಂಬೆ ಕಿಂಡಿಅಣೆಕಟ್ಟು ಮತ್ತು ನೀರಿನ ಲಭ್ಯತೆ:**

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಗೆ ಕುಡಿಯುವ ನೀರನ್ನು ನೇತ್ರಾವತಿ ನದಿಯ ಮೇಲೆ ಬಂಟ್ವಾಳ ತಾಲ್ಲೂಕಿನ ತುಂಬೆ ಎಂಬಲ್ಲಿ ನಿರ್ಮಿಸಲಾದ ಕಿಂಡಿ ಅಣೆಕಟ್ಟಿನಿಂದ ಕುಡಿಯುವ ನೀರಿನ ಪೂರೈಕೆ ಮಾಡಲಾಗುತ್ತಿದೆ. ಪ್ರಸ್ತುತ ನೇತ್ರಾವತಿ ನದಿಯಲ್ಲಿ ನೀರಿನ ಒಳಹರಿವು ಇದ್ದು, ಗರಿಷ್ಠ ಪ್ರಮಾಣದಲ್ಲಿ ಅಂದರೆ 6.00 ಮೀಟರ್ ಎತ್ತರಕ್ಕೆ (10.40ಮೀ ಎಮ್.ಸಿ.ಎಮ್) ನೀರನ್ನು ಸಂಗ್ರಹಿಸಲಾಗಿರುತ್ತದೆ. ನೇತ್ರಾವತಿ ನದಿಯಲ್ಲಿ ಒಳಹರಿವು ನಿಂತಲ್ಲಿ ಸುಮಾರು 40 ದಿನಗಳಿಗೆ ನಗರಕ್ಕೆ ನೀರನ್ನು ಒದಗಿಸಬಹುದಾಗಿದ್ದು, ಮಾರ್ಚ್ 15ರವರೆಗೆ ನೀರಿನ ಒಳಹರಿವು ಇರುವ ಸಾಧ್ಯತೆ ಇರುತ್ತದೆ. ವಾಡಿಕೆಯಂತೆ ದಕ್ಷಿಣ ಕನ್ನಡ ಜಿಲ್ಲೆಗೆ ಜೂನ್ ಮೊದಲ ವಾರದಲ್ಲಿ ಮಳೆಗಾಲವು ಪ್ರಾರಂಭವಾಗುತ್ತಿದ್ದು, ಇದನ್ನು `ಪರಿಗಣಿಸಿದ್ದಲ್ಲಿ ಸುಮಾರು 50 ದಿನಗಳಿಗೆ ಹೆಚ್ಚುವರಿಯಾಗಿ ನೀರಿನ ಅವಶ್ಯಕತೆ ಇರುತ್ತದೆ.

ಎಪ್ರಿಲ್ ತಿಂಗಳಲ್ಲಿ ಹಿಂಗಾರುಮಳೆ ಆಗದ ಸಂದರ್ಭದಲ್ಲಿ ತುಂಬೆ ಕಿಂಡಿ ಅಣೆಕಟ್ಟಿನ ಹಿಂಬಾಗದಲ್ಲಿರುವ AMR ಜಲಾಶಯದಿಂದ ಈ ಹಿಂದೆ ಚಾಲ್ತಿಯಲ್ಲಿರುವಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆದೇಶದಂತೆ ನೀರನ್ನು ಬಿಡಿಸಿಕೊಳ್ಳಲಾಗುತ್ತಿದೆ ಹಾಗೂ ತುಂಬೆ ವೆಂಟೆಡ್ ಡ್ಯಾಮ್‌ನ ಕೆಳಭಾಗದಲ್ಲಿರುವ ಅಡ್ಯಾರ್ ಕಿಂಡಿ ಅಣೆಕಟ್ಟಿನಲ್ಲಿ ಶೇಖರಣೆಯಾದ ನೀರನ್ನು ಪ್ರತಿದಿನ ಗರಿಷ್ಠ 50 MLD ಪ್ರಮಾಣದಲ್ಲಿ ತುಂಬೆ ಡ್ಯಾಮ್ ಗೆ ಹಿಮ್ಮುಖವಾಗಿ ಪಂಪಿಂಗ್ ಮಾಡಿ ನಗರಕ್ಕೆ ಕುಡಿಯುವ ನೀರಿನ ಸಂಗ್ರಹಣೆಯಲ್ಲಿ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತಿದೆ. ಈ ವಿಚಾರದಲ್ಲಿ ನೀರಿನ ಸಂಗ್ರಹಣೆ ಕುರಿತು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಈಗಾಗಲೇ ಸಭೆಯಯನ್ನು ಕರೆಯಲಾಗಿರುತ್ತದೆ.

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಭಾವಿಗಳನ್ನು ಸ್ವಚ್ಛವಾಗಿಡಲು ಕ್ರಮವಹಿಸಲಾಗಿರುತ್ತದೆ ಹಾಗೂ ಕೊಳವೆ ಭಾವಿಗಳನ್ನು ಗುತ್ತಿಗೆದಾರರ ಮುಖಾಂತರ ನಿರ್ವಹಣೆ ಮಾಡಲಾಗುತ್ತಿದ್ದು, ಅವಶ್ಯಕತೆ ಇರುವಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕೊಳವೆ ಬಾವಿಗಳನ್ನು ಕೊರೆಯಲಾಗುವುದು. ನಗರದ ಎತ್ತರ ಪ್ರದೇಶಗಳಲ್ಲಿ ತಾಂತ್ರಿಕ ಸಮಸ್ಯೆಯಿಂದ ಕುಡಿಯುವ ನೀರಿನ ಸಮಸ್ಯೆ ಉಂಟಾದಲ್ಲಿ ಟ್ಯಾಂಕರ್‌ಗಳ ಮೂಲಕ ನೀರನ್ನು ಪೂರೈಸಲಾಗುತ್ತಿದೆ.

**ಅನಧಿಕೃತ ಸಂಪರ್ಕಗಳ ಬಗ್ಗೆ:**

ತುಂಬೆ ಕಿಂಡಿಅಣೆಕಟ್ಟಿನಿಂದ ನೀರನ್ನು ಪಂಪಿಂಗ್ ಮಾಡಿ ರಾಮಲ್‌ಕಟ್ಟೆ ಎಂಬಲ್ಲಿ ನೀರು ಶುದ್ಧೀಕರಣದ ನಂತರ ನಗರಕ್ಕೆ ಪೂರೈಕೆ ಮಾಡಲಾಗುತ್ತದೆ. ರಾಮಲ್‌ಕಟ್ಟೆ ಪ್ರದೇಶದಿಂದ ನಗರಪಾಲಿಕೆ ವ್ಯಾಪ್ತಿಯ ಸುಮಾರು 14 ಕಿ.ಮೀ. ದೂರದಲ್ಲಿದ್ದು 1000ಎಂ ಎಂ ವ್ಯಾಸದ ಮತ್ತು 1100 ಎಂ ಎಂ ವ್ಯಾಸದ ಕೊಳವೆಯ ಮೂಲಕ ಪಡೀಲ್ ಮತ್ತು ಬೆಂದೂರು ನೀರು ಸಂಗ್ರಹಗಾರಗಳಿಗೆ ಪೂರೈಕೆಯಾಗುತ್ತಿದೆ. ಈ ಕೊಳವೆಯಿಂದ ನಗರಕ್ಕೆ ದಾರಿಯಲ್ಲಿ ಬರುವ 3 ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಸುಮಾರು 48 ಕಡೆಗಳಲ್ಲಿ ಅನಧಿಕೃತವಾಗಿ ನೀರನ್ನು ಪಡೆದುಕೊಂಡಿದ್ದು ಪಾಲಿಕೆಯಿಂದ ಹಲವಾರು ಬಾರಿ ಸಂಪರ್ಕಗಳನ್ನು ಕಡಿತಗೊಳಿಸಲು ಪ್ರಯತ್ನಿಸಲಾಗಿದ್ದು, ಗ್ರಾಮಸ್ಥರ ವಿರೋಧದಿಂದ ಮತ್ತು ತಾಂತ್ರಿಕ ಕಾರಣಗಳಿಂದ ಕಡಿತಗೊಳಿಸಲು ಕಷ್ಟಸಾಧ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಅಮೃತ್ ಯೋಜನೆಯಡಿಯಲ್ಲಿ ಪಾಲಿಕೆಯ ಸಾಮಾನ್ಯ ಸಭೆಯ ನಿರ್ಣಯದಂತೆ ಕೆಯುಐಡಿಎಫ್‌ಸಿ ವತಿಯಿಂದ ಪಾಲಿಕೆಯ ಹಾಲಿ ಇರುವ 10

ಎಂಎಲ್‌ಡಿ ಸ್ಥಾವರವನ್ನು 20 ಎಂಎಲ್ ಡಿ ಮೇಲ್ದರ್ಜೆಗೆ ಏರಿಸಿ (ಸುಮಾರು 33.25 ಕೋಟಿ ವೆಚ್ಚದಲ್ಲಿ) ಅದರಲ್ಲಿ 10 ಎಂಎಲ್‌ಡಿ ಯಷ್ಟು ನೀರನ್ನು ಮೇಲೆ ತಿಳಿಸಿದ ಪಂಚಾಯತ್ ಗಳಿಗೆ ಸೂಕ್ತ ದರವನ್ನು ವಿಧಿಸಿ ಪೂರೈಕೆ ಮಾಡಲು ನಿರ್ಣಯಿಸಲಾಗಿರುತ್ತದೆ.

ಮುಂದುವರಿದು, ಗ್ರಾಮಾಂತರ ಪ್ರದೇಶಕ್ಕೆ ನೀರು ಪೂರೈಕೆ ಮಾಡುವ ಕಾಮಗಾರಿಗಳನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಕೈಗೊಳ್ಳಲಾಗುತ್ತಿದ್ದು, ಈ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದ್ದು ಪರೀಕ್ಷಾ ಹಂತದಲ್ಲಿರುತ್ತದೆ.

ಅದೇ ರೀತಿ ಮೇಲ ತಿಳಿಸಿದ ಅಮೃತ್ ಯೋಜನೆಯಂತೆ ಗ್ರಾಮಾಂತರ ಪ್ರದೇಶಕ್ಕೆ ನೀರನ್ನು ಪೂರೈಕೆ ಮಾಡಿದ್ದಲ್ಲಿ ಈ ಮೇಲೆ ತಿಳಿಸಿದಂತೆ ಒಟ್ಟು 48 ಅನಧಿಕೃತ ಜೋಡಣೆಗಳನ್ನು ಕಡಿತಗೊಳಿಸುವ ಬಗ್ಗೆ ದಿನಾಂಕ:01.03.2025 ಹಾಗೂ 06.02.2026ರಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಮಂಗಳೂರು ಇವರಿಗೆ ಪತ್ರದ ಮೂಲಕ ಕೋರಲಾಗಿದ್ದು, ಜೋಡಣೆಗಳನ್ನು ಕಡಿತಗೊಳಿಸಲು ಸಂಬಂಧಪಟ್ಟ ಇಲಾಖೆಯಿಂದ ಸಮನ್ವಯ ಸಾಧಿಸಿ ಕ್ರಮವಹಿಸಲಾಗುವುದು.

**ನಅಇ 22 ಎಂಎಂಸಿ 2026(ಇ)**

**(ಬಿ.ಎಸ್. ಸುರೇಶ)**
**ನಗರಾಭಿವೃದ್ಧಿ ಹಾಗೂ ನಗರ ಯೋಜನ**
**ಸಚಿವರು**